FEBRUARY 08, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಬೆಣ್ಣಿ ಹಳ್ಳದ ಪ್ರವಾಹ ಪರಿಹಾರ ಕಾಮಗಾರಿ;** ಹುಬ್ಬಳ್ಳಿ ತಾಲೂಕು ಶಿರಗುಪ್ಪಿ ಗ್ರಾಮದಲ್ಲಿ, ಇಂದು ಮುಖ್ಯಮಂತ್ರಿ ಚಾಲನೆ.
- **ಬೆಂಗಳೂರಿನ, ಅಂತಾರಾಷ್ಟ್ರೀಯ ವಾಣಿಜ್ಯ ಮೇಳಕ್ಕೆ,** ಇಂದು ತೆರೆ; ಕೇಂದ್ರ ಕೃಷಿ ಖಾತೆ ಸಚಿವ, ಶಿವರಾಜಸಿಂಗ್ ಚೌವ್ಹಾಣ, ಭಾಗಿ.
- **ಕೇಂದ್ರ ಬಜೆಟ್; ಕರ್ನಾಟಕದ ರೇಲ್ವೆ ಯೋಜನೆಗಳಿಗೆ,** 7 ಸಾವಿರದ 748 ಕೋಟಿ ರೂಪಾಯಿ, ಅನುದಾನ ಮೀಸಲು.
- **ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆ;** ಉಡುಪಿ ಜಿಲ್ಲೆಯ, 4 ಸಾವಿರದ 413 ಫಲಾನುಭವಿಗಳಿಗೆ, ಆರ್ಥಿಕ ಅನುಮೋದನೆ.

<><><>

**ಈಗ ವಾರ್ತೆಗಳ ವಿವರ**

<><><>

**ಧಾರವಾಡ ಜಿಲ್ಲೆಯ, ಕುಂದಗೋಳ,** ನವಲಗುಂದ ಹಾಗೂ ಹುಬ್ಬಳ್ಳಿ ಗ್ರಾಮೀಣ ಭಾಗದಲ್ಲಿ, ಮಳೆಗಾಲದಲ್ಲಿ ಉಂಟಾಗುವ, ಬೆಣ್ಣಿ ಹಳ್ಳ ಪ್ರವಾಹ ಸಮಸ್ಯೆಗೆ, ಮೊದಲ ಹಂತದಲ್ಲಿ, 200 ಕೋಟಿ ರೂಪಾಯಿ ವೆಚ್ಚದಲ್ಲಿ, ರಾಜ್ಯ ಜಲ ಸಂಪನ್ಮೂಲ ಇಲಾಖೆ, ಕರ್ನಾಟಕ ನೀರಾವರಿ ನಿಗಮ ನಿಯಮಿತದ ಸಹಯೋಗದಲ್ಲಿ, ಕೈಗೊಳ್ಳುತ್ತಿರುವ ಕಾಮಗಾರಿಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂದು ಶಿಲಾನ್ಯಾಸ ನೆರವೇರಿಸಲಿದ್ದಾರೆ. ಇಂದು ಮಧ್ಯಾಹ್ನ 3 ಗಂಟೆಗೆ, ಹುಬ್ಬಳ್ಳಿ ತಾಲೂಕು, ಶಿರಗುಪ್ಪಿ ಗ್ರಾಮದಲ್ಲಿ, ಜಲ ಸಂಪನ್ಮೂಲ ಖಾತೆ ಸಚಿವ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಉಪಸ್ಥಿತಿಯಲ್ಲಿ, ಬೆಣ್ಣಿ ಹಳ್ಳದ ಪ್ರವಾಹ ನಿಯಂತ್ರಣ ಕಾಮಗಾರಿಗೆ, ಮುಖ್ಯಮಂತ್ರಿ ಚಾಲನೆ ನೀಡಲಿದ್ದಾರೆ. ನವಲಗುಂದ ಶಾಸಕ ಎನ್.ಎಚ್. ಕೋನರಡ್ಡಿ ಅಧ್ಯಕ್ಷತೆ ವಹಿಸಲಿದ್ದಾರೆ.

<><><>

**ಬೆಣ್ಣಿ ಹಳ್ಳ, ಹಾವೇರಿ ಜಿಲ್ಲೆ, ಶಿಗ್ಗಾಂವಿ ತಾಲೂಕು,** ದುಂಡಶಿಯಿಂದ, ಗದಗ ಜಿಲ್ಲೆ, ರೋಣ ತಾಲೂಕು, ಮೆಣಸಗಿ ಗ್ರಾಮದ ವರೆಗೆ, 148 ಕಿಲೋ ಮೀಟರ್ ಉದ್ದ ಹರಿಯುತ್ತದೆ. ಮೊದಲ ಹಂತದಲ್ಲಿ, ಬೆಣ್ಣಿ ಹಳ್ಳದ 53ನೇ ಕಿಲೋ ಮೀಟರ್ ದಿಂದ, 148 ಕಿಲೋ ಮೀಟರ್ ವರೆಗೆ ಕಾಮಗಾರಿ ನಡೆಯಲಿದೆ. ಈ ಭಾಗದಲ್ಲಿ, ಅತೀ ಹೆಚ್ಚು ಪ್ರವಾಹ ಪೀಡಿತ ಪ್ರದೇಶಗಳಲ್ಲಿ, 1 ಕಿಲೋ ಮೀಟರ್ ನಿಂದ, 7 ಕಿಲೋ ಮೀಟರ್ ವರೆಗೆ ತಡೆಗೋಡೆ, 86 ಉಪ ಹಳ್ಳಗಳು ಸೇರುವ ಸ್ಥಳದಲ್ಲಿ, ಕಿರು ಅಣೆಕಟ್ಟೆ ರೂಪಿಸಲು, ಜಲ ಸಂಪನ್ಮೂಲ ಇಲಾಖೆ ಯೋಜಿಸಿದೆ.

<><><>

**ನೀರಾವರಿ ತಜ್ಞ ಪರಮಶಿವಯ್ಯ** ನೇತೃತ್ವದ ಸಮಿತಿ, 2010ರಲ್ಲಿ ಬೆಣ್ಣಿ ಹಳ್ಳ ಪ್ರವಾಹ ಸಮಸ್ಯೆ ಪರಿಹಾರ ಕುರಿತು, ತನ್ನ ಸಮಗ್ರ ವರದಿಯನ್ನು, ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ.

<><><>

**‘ಉತ್ಪಾದನೋತ್ತರ ಕೃಷಿ: ರೈತರ ಸಬಲೀಕರಣ’** ಧ್ಯೇಯದೊಂದಿಗೆ, ಬೆಂಗಳೂರಿನಅರಮನೆ ಮೈದಾನದ, ತ್ರಿಪುರವಾಸಿನಿ ಸಭಾಂಗಣದಲ್ಲಿ, ಕೃಷಿ ಇಲಾಖೆ ಆಯೋಜಿಸಿದ, 3 ದಿನಗಳ ಅಂತಾರಾಷ್ಟ್ರೀಯ ವಾಣಿಜ್ಯ ಮೇಳ, ಇಂದು ಮಧ್ಯಾಹ್ನ 12 ಗಂಟೆಗೆ, ಸಮಾರೋಪಗೊಳ್ಳಲಿದೆ. ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಹಾಗೂ ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಶಿವರಾಜ ಸಿಂಗ್ ಚೌವ್ಹಾಣ ಹಾಗೂ ಕೇಂದ್ರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ, ರಾಜ್ಯ ಖಾತೆ ಸಚಿವರಾದ, ಶೋಭಾ ಕರಂದ್ಲಾಜೆ, ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ಭಾಗವಹಿಸಲಿದ್ದು, ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಶಾಸಕ, ಸಿ.ಎನ್.ಅಶ್ವತ್ಥನಾರಾಯಣ, ಅಧ್ಯಕ್ಷತೆ ವಹಿಸಲಿದ್ದಾರೆ.

<><><>

**ಧಾರವಾಡ ತಾಲೂಕುಅಳ್ನಾವರ** ಹಾಗೂ ಉತ್ತರಕನ್ನಡ ಜಿಲ್ಲೆ, ದಾಂಡೇಲಿ ಮಧ್ಯದ, ಡಿಸೈಲ್ ಇಲೆಕ್ಟ್ರಿಕ್ ಮಲ್ಟಿಪಲ್ ಯುನಿಟ್ – ಡೆಮು ರೈಲಿಗೆ, ದಾಂಡೇಲಿ ರೈಲು ನಿಲ್ದಾಣದಲ್ಲಿ, ಕೇಂದ್ರ ರೇಲ್ವೆ ಖಾತೆ ರಾಜ್ಯ ಸಚಿವ, ವಿ. ಸೋಮಣ್ಣ, ಚಾಲನೆ ನೀಡಿದರು. ಬಳಿಕ ಮಾತನಾಡಿ, 2026–27 ರ ಕೇಂದ್ರ ಬಜೆಟ್‌ನಲ್ಲಿ, ಕರ್ನಾಟಕದ ರೇಲ್ವೆ ಯೋಜನೆಗಳಿಗೆ, 7 ಸಾವಿರದ 748 ಕೋಟಿ ರೂಪಾಯಿ, ಅನುದಾನ ಮೀಸಲಿರಿಸಲಾಗಿದೆ ಎಂದರು. ಡೆಮು ಪ್ರಯಾಣಿಕ ರೈಲು ಸೇವೆ, ನಾಳೆಯಿಂದ ಪ್ರಾರಂಭವಾಗಲಿದ್ದು, ಭಾನುವಾರ ಹೊರತುಪಡಿಸಿ, ವಾರದ ಆರು ದಿನ ಸಂಚರಿಸಲಿದೆ.

<><><>

**ರಾಜ್ಯದಲ್ಲಿ, ಆರೋಗ್ಯ ಹಕ್ಕು ಕಾಯ್ದೆ** ಜಾರಿಗೊಳ್ಳಬೇಕು; ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಹಾಗೂ ಗುಣಮಟ್ಟದ ಔ ‘ಧ ಲಭ್ಯವಾಗಬೇಕು ಎಂದು ಆಗ್ರಹಿಸಿ, ಡ್ರಗ್ ಆಕ್ಷನ್ ಫೋರಮ್ ಕರ್ನಾಟಕ ಸೇರಿದಂತೆ, ವಿವಿಧ ಸಂಘಟನೆಗಳ ಪದಾಧಿಕಾರಿಗಳು, ರಾಜ್ಯಾದ್ಯಂತ ಜನ ಜಾಗೃತಿ ಜಾಥಾ, ಆಯೋಜಿಸಿದ್ದಾರೆ. ಸ್ವಾತಂತ್ರ್ಯಯೋಧ, ನರಸಿಂಹ ದಾಬಡೆ ಸ್ಮಾರಕ, ಪ್ರಧಾನಮಂತ್ರಿ ಜನೌ ‘ಧಿ ಕೇಂದ್ರದ ಸಂಚಾಲಕ, ಧಾರವಾಡದ ಡಾಕ್ಟರ್ ಗೋಪಾಲ ದಾಬಡೆ, ಪ್ರದೇಶ ಸಮಾಚಾರಕ್ಕಾಗಿ,ಮಾಹಿತಿ ನೀಡಿದ್ದಾರೆ.

<><><>

**ಡಾ. ಗೋಪಾಲ ದಾಬಡೆ ಧ್ವನಿ 60 ಸೆಕೆಂದುಗಳು**

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆ ಅಡಿ,** ಸಬ್ಸಿಡಿ ದರದಲ್ಲಿ, ಸೌರ ಫಲಕ ಅಳವಡಿಸಿ, ಉಚಿತ ವಿದ್ಯುತ್ ಒದಗಿಸುವುದರ ಜೊತೆಗೆ, ವಿದ್ಯುತ್ ಶಕ್ತಿಯ ವೆಚ್ಚವನ್ನು ಗಣನೀಯವಾಗಿ ಕಡಿಮೆ ಮಾಡಿದೆ ಎಂದು, ಉಡುಪಿ–ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಂಸದ, ಕೋಟ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ. ಉಡುಪಿಯ, ಮಣಿಪಾಲ ರಜತಾದ್ರಿಯ, ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆಯ, ಪ್ರಗತಿ ಪರಿಶೀಲಿಸಿ, ಮಾತನಾಡಿದರು. ಜಿಲ್ಲೆಯಲ್ಲಿ ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆಯಡಿ, 4 ಸಾವಿರದ 435 ಜನ ಅರ್ಜಿ ಸಲ್ಲಿಸಿದ್ದಾರೆ. ಆ ಪೈಕಿ, 4 ಸಾವಿರದ 413 ಫಲಾನುಭವಿಗಳಿಗೆ, ಆರ್ಥಿಕ ಅನುಮೋದನೆ ದೊರೆತಿದೆ ಎಂದರು.

<><><>

**ಸಾರ್ವಜನಿಕರಿಂದ ದೂರು** ಅಥವಾ ಅರ್ಜಿ ಸಲ್ಲಿಕೆಯಾದಲ್ಲಿ, ಸಂಬಂಧಪಟ್ಟ ಅಧಿಕಾರಿ, ಸಂದರ್ಭೋಚಿತ, ಸಮಯೋಚಿತ ಹಾಗೂ ಕಾಲಮಿತಿಯಲ್ಲಿ, ಕಾನೂನಿನಡಿ, ಪರಿಹಾರ ದೂರಕಿಸಿ ಕೊಡಲು, ಬದ್ಧರಾಗಬೇಕು ಎಂದು, ಉಪಲೋಕಾಯುಕ್ತ, ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ, ಸೂಚಿಸಿದ್ದಾರೆ. ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲೂಕು ಪಂಚಾಯ್ತಿಯ, ಸಾಮರ್ಥ್ಯ ಸೌಧದಲ್ಲಿ, ಚಿಂತಾಮಣಿ, ಬಾಗೇಪಲ್ಲಿ, ಶಿಡ್ಲಘಟ್ಟ ಮತ್ತು ಚೇಳೂರು ತಾಲೂಕುಗಳಿಗೆ ಸಂಬಂಧಿಸಿದ, ಲೋಕಾಯುಕ್ತ ಪ್ರಕರಣಗಳ ವಿಚಾರಣೆ ನಡೆಸಿ, ಅವರು ಮಾತನಾಡಿದರು.

<><><>

**ಚಿಕ್ಕಮಗಳೂರು, ಕೊಡಗು,** ಉಡುಪಿ, ಕೊಪ್ಪಳ, ವಿಜಯನಗರ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ, ಇತ್ತೀಚೆಗೆ ಮನುಷ್ಯರ ಮೇಲೆ, ಚಿರತೆಗಳ ದಾಳಿ, ಏರುಗತಿಯಲ್ಲಿದೆ. ಈ ಹಿನ್ನೆಲೆ, ಅರಣ್ಯ ಇಲಾಖೆಯ, ವನ್ಯಜೀವಿ ಸಂರಕ್ಷಣಾ ವಿಭಾಗ, ಹಲವು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದು, ಚಿರತೆಗಳ ಚಲನವಲನದ ಪ್ರದೇಶದಲ್ಲಿ, ಜನ ಮುಂಜಾಗ್ರತೆ ವಹಿಸುವಂತೆ, ಮನವಿ ಮಾಡಿದೆ.

<><><>

**ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ,** ಬೆಂಗಳೂರಿನ ಹೊಳೆಮತ್ತಿ ನೇಚರ್ ಕಾನ್ಸರ್ವೇಶನ್ ಫೌಂಡೇಶನ್ ಅಧ್ಯಕ್ಷ ಹಾಗೂ ಚಿರತೆಗಳ ಬಗ್ಗೆ ಅಧ್ಯಯನ ನಡೆಸುತ್ತಿರುವ, ಡಾಕ್ಟರ್ ಸಂಜಯ ಗುಬ್ಬಿ.

<><><>

**ಡಾ.ಸಂಜಯ ಗುಬ್ಬಿ ಧ್ವನಿ 60 ಸೆಕೆಂದುಗಳು**

<><><>

**ಕ್ಯಾಸನೂರ್ ಅರಣ್ಯ ರೋಗದ ವಿರುದ್ಧ,** ಸುಧಾರಿತ ಲಸಿಕೆ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದೆ ಎಂದು, ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ ವರದಿ ಉಲ್ಲೇಖಿಸಿ, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ತಿಳಿಸಿದೆ. ಕರ್ನಾಟಕ ಸೇರಿದಂತೆ, ಪಶ್ಚಿಮಘಟ್ಟದ ತಪ್ಪಲಿನ ಎಲ್ಲ ರಾಜ್ಯಗಳಲ್ಲಿ, ಕ್ಯಾಸನೂರು ಮಂಗನ ಕಾಯಿಲೆ, ಪ್ರಮುಖ ಪ್ರಾದೇಶಿಕ ಸಾಂಕ್ರಾಮಿಕ ರೋಗ ಎಂದು, ಪರಿಗಣಿತವಾಗಿದೆ. ಲಸಿಕೆಯನ್ನು ಪ್ರಾಣಿಗಳ ಮೇಲೆ ಪ್ರಯೋಗಿಸಿ ಪರೀಕ್ಷಿಸಲಾಗಿದ್ದು, ವಿ ತ್ವ ಅಧ್ಯಯನ ಸಹ

ಪೂರ್ಣಗೊಂಡಿದೆ. ಕೇಂದ್ರ ಔ ಧ ಗುಣಮಟ್ಟ ನಿಯಂತ್ರಣ ಸಂಸ್ಥೆಯ ಅನುಮೋದನೆಯ ನಂತರ, 1ನೇ ಹಂತದ, ಮಾನವ ಕ್ಲಿನಿಕಲ್ ಪ್ರಯೋಗ ಪ್ರಾರಂಭಿಸಲಾಗಿದೆ ಎಂದು, ಪ್ರಕಟಣೆ ತಿಳಿಸಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಬೆಣ್ಣೆ ಹಳ್ಳದ ಪ್ರವಾಹ ಪರಿಹಾರ ಕಾಮಗಾರಿ;** ಹುಬ್ಬಳ್ಳಿ ತಾಲೂಕು ಶಿರಗುಪ್ಪಿ ಗ್ರಾಮದಲ್ಲಿ, ಇಂದು ಮುಖ್ಯಮಂತ್ರಿ ಚಾಲನೆ.

- **ಬೆಂಗಳೂರಿನ, ಅಂತಾರಾಷ್ಟ್ರೀಯ ವಾಣಿಜ್ಯ ಮೇಳಕ್ಕೆ,** ಇಂದು ತೆರೆ; ಕೇಂದ್ರ ಕೃಷಿ ಖಾತೆ ಸಚಿವ, ಶಿವರಾಜಸಿಂಗ್ ಚೌವ್ಹಾಣ, ಭಾಗಿ.

- **ಕೇಂದ್ರ ಬಜೆಟ್; ಕರ್ನಾಟಕದ ರೇಲ್ವೆ ಯೋಜನೆಗಳಿಗೆ,** 7 ಸಾವಿರದ 748 ಕೋಟಿ ರೂಪಾಯಿ, ಅನುದಾನ ಮೀಸಲು.
- **ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆ;** ಉಡುಪಿ ಜಿಲ್ಲೆಯ, 4 ಸಾವಿರದ 413 ಫಲಾನುಭವಿಗಳಿಗೆ, ಆರ್ಥಿಕ ಅನುಮೋದನೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>